‘ಶಿವ ತಾಂಡವ ಸ್ತೋತ್ರ’ ದ ಪ್ರತಿ ಪದ-ಅರ್ಥ ಹಾಗೂ ತಾತ್ಪರ್ಯ

ಜಟಾಟವೀಗಲಜ್ಜಲಪ್ರವಾಹಪಾವಿತಸ್ಥಲೇ
ಗಲೇವಲಂಬ್ಯ ಲಂಬಿತಾಂ ಭುಜಂಗತುಂಗಮಾಲಿಕಾಮ್ ।
ಡಮಡ್ಡಮಡ್ಡಮಡ್ಡಮನ್ನಿನಾದವಡ್ಡಮರ್ವಯಮ್
ಚಕಾರ ಚಂಡತಾಂಡವಂ ತನೋತು ನಃ ಶಿವಃ ಶಿವಮ್ ॥ 1 ॥

ಪ್ರತಿ ಪದದ ಅರ್ಥ 1.**ಜಟಾ**- ಜಟೆಗಳೆಂಬ **ಅಟವೀ** - ಅರಣ್ಯದಿಂದ **ಗಲತ್** - ಹರಿಯುವ, **ಪ್ರವಾಹ** - ಗಂಗೆಯ ಪ್ರವಾಹದಿಂದ,**ಪಾವಿತ-** ಪವಿತ್ರವಾಗಿಸಲ್ಪಟ್ಟ,**ಸ್ಥಲೇ** - ಸ್ಥಳದಲ್ಲಿ, **ಗಲೇ** - ಕುತ್ತಿಗೆಯಲ್ಲಿ,**ಅವಲಂಬ್ಯ** - ಕುತ್ತಿಗೆಯನ್ನು ಆಧರಿಸಿ,**ಲಂಬಿತಾಮ್**- ತೂಗಾಡುತ್ತಿರುವ

ಭುಜಂಗ - ಸರ್ಪಗಳ, **ತುಂಗ** - ಎತ್ತರರದ, **ಮಾಲಿಕಾಮ್** - ಮಾಲೆಗಳುಳ್ಳ, **ದಮದ್ಧಮದ್ಧಮಂ ನಿನಾದ ವತ್** - ದಮದ್...ಎಂಬ ಧ್ವನಿ ಹೊರಡಿಸುವ, **ಡಮರ್ವಯಂ** - ಡಮರುಗದ ನಾದದಿಂದ ತುಂಬಿದ, **ಚಂಡ** - ಪ್ರಚಂಡವಾದ, **ತಾಂಡವಂ** - ತಾಂಡವ ನೃತ್ಯವನ್ನು (ಯಃ- ಯಾರು) **ಚಕಾರ** - ಮಾಡಿದನೋ (ಅಂತಹ) **ಶಿವ:** ಶಿವನು **ನ:** - ನಮಗೆ **ಶಿವಂ** - ಮಂಗಲವನ್ನು **ತನೋತು** - ಉಂಟುಮಾಡಲಿ

1.<u>ತಾತ್ಪರ್ಯ</u> - ಅರಣ್ಯದ ಸಸ್ಯಗಳಂತೆ ನಿಬಿಡವಾಗಿ ಪಸರಿಸಿರುವ ಶಿವನ ಜಟಾ ಗಳಿಂದ ಹರಿಯುವ ಪ್ರವಾಹದಿಂದ (ಗಂಗೆಯಿಂದ) ಪವಿತ್ರವಾದ (ಕೈಲಾಸದಲ್ಲಿ), ಕಂಠದಲ್ಲಿ ಎತ್ತರಕ್ಕೆ ತೂಗಾಡುವ ಹಾವುಗಳ ಹಾರ ಹೊಂದಿ,ಡಮರುಗದಿಂದ ಹೊರಟ ದಮದ್ ಡಮದ್ ದಮನ್ ಎಂಬ ನಿನಾದದಿಂದ ಎಲ್ಲೆಡೆ ವ್ಯಾಪಿಸಿ, ಪ್ರಚಂಡ ತಾಂಡವ ನೃತ್ಯವನ್ನು ಮಾಡಿದ ಆ ಶಿವನು ನಮಗೆ ಮಂಗಳ ಉಂಟುಮಾಡಲಿ.

ಜಟಾಕಟಾಹಸಂಭ್ರಮಭ್ರಮನ್ನಿಲಿಂಪನಿರ್ಝರೀ-
-ವಿಲೋಲವೀಚಿವಲ್ಲರೀವಿರಾಜಮಾನಮೂರ್ಧನಿ ।
ಧಗದ್ಧಗದ್ಧಗಜ್ಜ್ವಲಲ್ಲಲಾಟಪಟ್ಟಪಾವಕೇ
ಕಿಶೋರಚಂದ್ರಶೇಖರೇ ರತಿಃ ಪ್ರತಿಕ್ಷಣಂ ಮಮ ॥ 2 ॥

ಪ್ರತಿ ಪದದ ಅರ್ಥ 2. **ಜಟಾ ಕಟಾಹ** – ಜಟಾಕೇಶರಾಶಿಯ **ಸಂಭ್ರಮ** – ಸಂಭ್ರಮದಿಂದ,ತೊನೆದಾಟದಿಂದ,

ಭ್ರಮನ್ – ತಿರುಗುತ್ತಿರುವ, **ನಿಲಿಂಪ** – ದೇವ **ನಿರ್ಝರೀ**– ನದಿಯು (ದೇವ ನದಿಯಾದ ಗಂಗೆಯು) **ವಿಲೋಲ** – ಚಂಚಲವಾದ **ವೀಚೀ** – ತರಂಗಗಳಿಂದ **ವಲ್ಲರೀ** – ಲತಾ ಗೃಹದಂತೆ **ವಿರಾಜಮಾನ** – ಶೋಭಿಸುವ **ಮೂರ್ಧನಿ** – ಶಿರೋಭಾಗವುಳ್ಳ

ಧಗದ್,ಧಗದ್, ಧಗದ್(ಎಂಬ ಶಬ್ದದೊಡನೆ 'ಧಗ-ಧಗಿಸುತ್ತ'), **ಜಲತ್** - ಸುಡುವ **ಲಲಾಟ** - ಹಣೆಯ **ಪಟ್ಟ** - ಮಣೆಯಲ್ಲಿರುವ **ಪಾವಕೇ** - ಅಗ್ನಿಯುಳ್ಳ ,

ಕಿಶೋರಚಂದ್ರ - ಬಾಲ ಚಂದ್ರನನ್ನು,**ಶೇಖರೇ** - ಶಿರೋಭೂಷಣವಾಗುಳ್ಳ (ಇಂಥ ಶಿವನಲ್ಲಿ)

ಪ್ರತಿ ಕ್ಷಣಂ - ಪ್ರತಿ ಕ್ಷಣದಲ್ಲೂ **ಮಮ**-ನನ್ನ **ರತಿ:** - ಪ್ರೀತಿಯು,ಭಕ್ತಿಯು (ಅಸ್ತು - ಇರಲಿ)

2.ತಾತ್ಪರ್ಯ - ಪರಶಿವನ ತಾಂಡವ ನೃತ್ಯ ಸಂಭ್ರಮದಲ್ಲಿ ತಲೆಯಲ್ಲಿ ತೂರಾಡುವ ಗುಂಪು ಗುಂಪು ಕೇಶ ರಾಶಿ.

ಆ ಜಟಾ- ಜೂಟದಲ್ಲಿ ಸತತ ಪ್ರವಹಿಸುವ ದೇವ ಗಂಗೆ.

ಆ ಗಂಗೆಯು ಶಿವನ ನರ್ತನಕ್ಕೆ ಸ್ಪಂದಿಸುತ್ತ, ಬಳ್ಳಿಗಳಂತೆ ಬಳುಕುತ್ತ ,ತುಳುಕುತ್ತ ವಿವಿಧ ಆಕಾರದ ಲತೆಗಳುಳ್ಳ ಒಂದು ಸುಂದರ **'ಜಲ ತರಂಗ ಲತಾ ಮಂಟಪ**'ವನ್ನೇ ಶಿವನ ಶಿರಸ್ಸಿನಲ್ಲಿ ನಿರ್ಮಿಸಿದಳೋ ಎಂಬಂತೆ ತೋರುವ **ಜಟಾ ಮಂಡಲ**.

ಧಗಧಗಿಸುತ್ತ (ಮೂರು ಲೋಕಗಳನ್ನೇ) ಸುಡಬಲ್ಲ ಬೆಂಕಿ **ಹಣೆ**-ಮಣೆಯ ಮೇಲೆ.(ಮೂರನೇ ಕಣ್ಣು).

ಹೀಗಿದ್ದರೂ ನೆನೆದವರ ಮನಕ್ಕೆ ಬೆಳದಿಂಗಳಿನಂತೆ ತಂಪು ಆಹ್ಲಾದಗಳನ್ನೂ ಅನುಗ್ರಹಿಸುವ ಬಾಲ-ಚಂದ್ರ (ನ) ಅಲಂಕಾರ **ಶಿರ**ದಲ್ಲಿ. ಇಂಥ ಶಿವನಲ್ಲಿ, ಎಂದೆಂದೂ ನನ್ನ ಪ್ರೀತಿ ಸ್ಥಿರವಾಗಿ ನೆಲೆಸಲಿ.

ಧರಾಧರೇಂದ್ರನಂದಿನೀವಿಲಾಸಬಂಧುಬಂಧುರ
ಸ್ಫುರದ್ದಿಗಂತಸಂತತಿಪ್ರಮೋದಮಾನಮಾನಸೇ ।
ಕೃಪಾಕಟಾಕ್ಷಧೋರಣೀನಿರುದ್ಧದುರ್ಧರಾಪದಿ
ಕ್ವಚಿದ್ದಿಗಂಬರೇ ಮನೋ ವಿನೋದಮೇತು ವಸ್ತುನಿ ॥ 3 ॥

ಪ್ರತಿ ಪದದ ಅರ್ಥ 3. **ಧರಾ** - ಭೂಮಿಯನ್ನು **ಧರ**- ಧರಿಸಿದವರಲ್ಲಿ (ಪರ್ವತಗಳಲ್ಲಿ) **ಇಂದ್ರ** - ಶ್ರೇಷ್ಠ ನಾದ (ಹಿಮವಂತನ) **ನಂದಿನಿ** - ಮಗಳಾದ (ಪಾರ್ವತಿಯ) **ವಿಲಾಸ** - ವಿಲಾಸಗಳಿಗೆ ಬಂಧು - ಅತ್ಯಾಪ್ತ ಸ್ನೇಹಿತನಾದ (ಪತಿಯಾದ)

ಬಂಧುರ - ಮನೋಹರವಾದ **ಸ್ಫುರತ್** - ಕಂಪಿಸುವ,ಪ್ರಕಾಶಿಸುವ **ದಿಗಂತ** - ಕ್ಷಿತಿಜ ದ (ದಿಕ್ಕುಗಳ ಅಂಚಿನ **)** **ಸಂತತಿ** - ಸಂತತಿಯನ್ನು,ವಿಸ್ತಾರವನ್ನು (ಕಂಡು)**ಪ್ರಮೋದಮಾನ** - ಸಂತೋಷಿಸುತ್ತಿರುವ **ಮಾನಸೇ** - ಮನಸ್ಸುಳ್ಳ

ಕೃಪಾ-ಕೃಪೆಯ **ಕಟಾಕ್ಷ** - ಕುಡಿ ನೋಟದ **ಧೋರಣೀ** - ಸಾತತ್ಯದಿಂದ, (ಸತತ ಅನುಗ್ರಹ ಧಾರೆ),**ನಿರುದ್ಧ** - ತಡೆಗಟ್ಟಿದ **ದುರ್ಧರ** - ಸಹಿಸಲಶಕ್ಯವಾದ **ಆಪದಿ** - ಆಪತ್ತುಗಳುಳ್ಳ

ಕ್ವಚಿತ್ -ಯಾವುದೋ ಒಂದು(ಅವರ್ಣನೀಯ) **ದಿಗಂಬರೇ ವಸ್ತುನಿ** - ದಿಗಂಬರ ತತ್ವದಲ್ಲಿ (ಮೇ)**ಮನಃ** - ನನ್ನ ಮನಸ್ಸು **ವಿನೋದಮ್** - ಸಂತೋಷವನ್ನು **ಏತು** - ಹೊಂದಲಿ

<u>3.ತಾತ್ಪರ್ಯ:</u>

ತಾಂಡವ ನೃತ್ಯದಿಂದ ದೂರದ ದಿಗಂತದಲ್ಲಿ ಉಂಟಾಗುವ ಕಂಪನದ ಮನೋಹರ ಅಲೆಗಳನ್ನು ವೀಕ್ಷಿಸುತ್ತ ಹರ್ಷ ನಿರ್ಭರ;

ಭಕ್ತರ ಸಹಿಸಲಶಕ್ಯವೆನಿಸುವ ಆಪತ್ತುಗಳನ್ನು ತನ್ನ ಕೃಪಾಪೂರ್ಣ ಕಡೆಗಣ್ಣ ಕುಡಿ ನೋಟದಿಂದಲೇ ಪರಿಹಾರಕ;

ಪರ್ವತರಾಜನ (ಹಿಮಾಲಯನ) ಪುತ್ರಿಯಾದ ಪಾರ್ವತಿಯ ವಿಲಾಸಗಳಿಗೆಲ್ಲ ಆಪ್ತ ಬಂಧು;

ಇಂಥ ಒಂದು ವಿಲಕ್ಷಣ, ವರ್ಣಿಸಲಾಗದ 'ದಿಗಂಬರ' (ಯಾವುದಕ್ಕೆ ದಿಕ್ಕುಗಳೇ ವಸ್ತ್ರಗಳೋ ಅಂತಹ) ತತ್ವವಿದೆ.

ಆ ಪರ-ತತ್ವದಲ್ಲಿ, ಪರಾತ್ಪರ 'ವಸ್ತು'ವಿನಲ್ಲಿ ನನ್ನ ಮನ ರಮಿಸಲಿ.

ತಾಂಡವ ನೃತ್ಯದ ಶಿವ ಒಂದು ವ್ಯಕ್ತಿ ಅಲ್ಲ, ಅದೊಂದು ಮಹಾನ್ ಶಕ್ತಿಯ ಆವಿರ್ಭಾವ, ಪರ ವಸ್ತು, ಉಪಾಸ್ಯ ತತ್ವ ಎಂಬ ಭಾವ ಇಲ್ಲಿ ಅಭಿವ್ಯಕ್ತವಾಗಿದೆ.

4. ಜಟಾಭುಜಂಗಪಿಂಗಳಸ್ಫುರತ್ಫಣಾಮಣಿಪ್ರಭಾ
ಕದಂಬಕುಂಕುಮದ್ರವಪ್ರಲಿಪ್ತದಿಗ್ವಧೂಮುಖೇ |
ಮದಾಂಧಸಿಂಧುರಸ್ಫುರತ್ತ್ವಗುತ್ತರೀಯಮೇದುರೇ
ಮನೋ ವಿನೋದಮದ್ಭುತಂ ಬಿಭರ್ತು ಭೂತಭರ್ತರಿ || 4 ||

ಪ್ರತಿ ಪದದ ಅರ್ಥ 4.ಜಟಾ ಭುಜಂಗ ಪಿಂಗಳ - ಸರ್ಪಗಳ ಪಿಂಗಳ ವರ್ಣದಂತೆ (ಕೆಂಪು ಮಿಶ್ರಿತ ಹಳದಿ) ಬಣ್ಣ ಹೊಂದಿದ ಜಟೆಗಳಿಂದ ಕೂಡಿದ

ಸ್ಫುರತ್ - ಪ್ರಕಾಶಿಸುವ **ಫಣಾ ಮಣಿ** - ಹಾವುಗಳ ಹೆಡೆಯಲ್ಲಿನ ಕೆಂಪು ರತ್ನಗಳ **ಪ್ರಭಾ ಕದಂಬ** - ಕಾಂತಿ ಸಮೂಹದಿಂದ

ಕುಂಕುಮ ದ್ರವ ಪ್ರಲಿಪ್ತ - ದ್ರವೀಕೃತ ಕುಂಕುಮ ಲೇಪಿತ, **ದಿಗ್ ವಧೂ ಮುಖೇ** - ದಿಕ್ಕು ಎಂಬ ವಧೂ ಮುಖವುಳ್ಳ

ಮದಾಂಧ ಸಿಂಧುರ - ಮದೋನ್ಮತ್ತ ಆನೆಯ **ಸ್ಫುರತ್** - ಮಿದುವಾದ,ಮಿನುಗುವ **ತ್ವಗುತ್ತರೀಯ** - ಚರ್ಮದ ಉತ್ತರೀಯ (ಮೇಲು ವಸ್ತ್ರ)ದಿಂದ **ಮೇದುರೇ** - ವ್ಯಾಪಿಸಿದ;

ಅದ್ಭುತಮ್ ಬಿಭರ್ತು: - ಅಸಾಧಾರಣ ಧಾರಕನಾದ **ಭೂತ ಭರ್ತರಿ** - ಭೂತನಾಥನಲ್ಲಿ

ಮನ: - ಮನಸ್ಸು **ವಿನೋದಮ್** - ಮುದವನ್ನು **ಏತು** - ಪಡೆಯಲಿ (ಹಿಂದಿನ ಶ್ಲೋಕದಿಂದ 'ಏತು' ಎಂಬ ಕ್ರಿಯಾಪದವನ್ನು 'ಅಧ್ಯಾಹಾರ' ಮಾಡಿಕೊಳ್ಳಬೇಕು/ ತರಬೇಕು).

<u>4.ತಾತ್ಪರ್ಯ -</u> ಶಿವನ ಪಿಂಗಳ (ಕಂದು) ವರ್ಣದ ಜಟೆಗಳು. ಅಲ್ಲಲ್ಲಿ ಎದ್ದು ಕಾಣುವ ಹೆಡೆಗಳ ಕೆಂಪು ರತ್ನಗಳು

ಆ ಕೆಂಪು ರತ್ನ ಪ್ರಭಾವಳಿ ದಿಗಂತದಲ್ಲೆಲ್ಲ ವ್ಯಾಪಿಸಿ, ದಿಕ್ ಎಂಬ ವಧುವಿನ ಮುಖವು ಕುಂಕುಮದಲ್ಲಿ ಅದ್ದಿ ತೆಗೆದಂತಿತ್ತು(ಕುಂಕುಮ ದ್ರವ ಪ್ರಲಿಪ್ತ) ಹೋಲಿಸಿ - 'ಮುಖ, ಕುಂಕುಮ ಕರಡಿಗೆಯಾಗಿತ್ತು,ಆಗ ಸಂಜೆಯಾಗಿತ್ತು'.

ಮದೋನ್ಮತ್ತ ಗಜ-ಚರ್ಮದ ಉತ್ತರೀಯ ಅಲ್ಲಿಲ್ಲಿ ಸರಿದಾಡುತ್ತ ಮನೋಹರವಾಗಿತ್ತು (ನರ್ತನ ಸಮಯ)

ಭೂತ ಭವಿಷ್ಯದ್ ವರ್ತಮಾನಗಳನ್ನು ತನ್ನಲ್ಲಿ ಧರಿಸಿದ,ಭೂತ ಗಣಗಳ ಅಧಿಪತಿಯಾದ ಶಿವನ ಈ ಅದ್ಭುತ (ತಾಂಡವ) ವನ್ನು ನನ್ನ ಮನಸ್ಸು ಹೊಂದಲಿ(ತಿಳಿಯಲಿ) ಸಂತೋಷಿಸಲಿ,ತಿಳಿದು ಸಂತೋಷಿಸಲಿ.

ಸಹಸ್ರಲೋಚನಪ್ರಭೃತ್ಯಶೇಷಲೇಖಶೇಖರ
ಪ್ರಸೂನಧೂಳಿಧೋರಣೀ ವಿಧೂಸರಾಂಘ್ರಿಪೀಠಭೂಃ ।
ಭುಜಂಗರಾಜಮಾಲಯಾ ನಿಬದ್ಧಜಾಟಜೂಟಕ
ಶ್ರಿಯೈ ಚಿರಾಯ ಜಾಯತಾಂ ಚಕೋರಬಂಧುಶೇಖರಃ ॥ 5 ॥

ಪ್ರತಿ ಪದದ ಅರ್ಥ 5. **ಸಹಸ್ರ ಲೋಚನ ಪ್ರಭೃತಿ** - ಇಂದ್ರನೇ ಮೊದಲಾದ ಅಶೇಷ -ಎಲ್ಲ **ಲೇಖ** -ದೇವತಾ

ಶೇಖರ - ಶ್ರೇಷ್ಠರ **ಪ್ರಸೂನ** -ಹೂ ಹಾರಗಳ **ಧೂಳಿ** - ಪರಾಗ ಕಣಗಳ **ಧೋರಣೀ** - ಸಮೂಹದಿಂದ **ವಿಧೂಸರ** - ವರ್ಣರಂಜಿತವಾದ **ಅಂಘ್ರಿಪೀಠ** - ಪಾದಪೀಠ ವುಳ್ಳ **ಭೂ**: - ಭೂ ಪ್ರದೇಶವುಳ್ಳ

ಭುಜಂಗ ರಾಜ ಮಾಲಯಾ - ಶ್ರೇಷ್ಠ ಸರ್ಪಗಳ ಮಾಲೆಯಿಂದ **ನಿಬಧ್ಧ** - ಕಟ್ಟಲ್ಪಟ್ಟ **ಜಟಾಜೂಟಕ** - ಜಟೆಯ ಸಮೂಹವುಳ್ಳ

ಚಕೋರ - ಚಕೋರ ಪಕ್ಷಿಗಳಿಗೆ **ಬಂಧು** - ಬಂಧುವಾದ ಚಂದ್ರನನ್ನು **ಶೇಖರ:** - ಶಿರೋ ಅಲಂಕಾರವಾಗುಳ್ಳ ಶಿವನು **ಚಿರಾಯ** - ಚಿರಕಾಲದ **ಶ್ರಿಯೈ** - ಲೌಕಿಕ ಹಾಗೂ ಆಧ್ಯಾತ್ಮಿಕ ಸಂಪತ್ತಿಗೆ **ಜಾಯತಾಂ** - ಜನಕನಾಗಲಿ

<u>5.ತಾತ್ಪರ್ಯ</u> - ಇಂದ್ರನೇ ಮೊದಲಾದ ಎಲ್ಲ ದೇವತಾಶ್ರೇಷ್ಟರು ಧರಿಸಿದ ಹೂ ಹಾರಗಳ ಪರಾಗ ಕಣಗಳಿಂದ ಅಲಂಕೃತ ಪಾದಪೀಠ ವುಳ್ಳ,

(ದೇವತೆಗಳು ನಮಿಸಲು ಶಿವನ ಪಾದ ಪೀಠಕ್ಕೆ ಬಾಗಿದ್ದಾಗ ಅವರ ಹಾರಗಳಲ್ಲಿನ ಪುಷ್ಪಗಳಿಂದ ಉದುರಿದ ಪರಾಗ ಕಣಗಳಿಂದ ಭೂಷಿತವಾಗಿದೆ ಪೀಠ ಭೂಭಾಗ)

ಶ್ರೇಷ್ಠ ಜಾತಿಯ ಸರ್ಪಗಳಿಂದ ಕಟ್ಟಲ್ಪಟ್ಟ ಜಟಾಜೂಟ ವುಳ್ಳ,

ಚಕೋರ ಪಕ್ಷಿ (ಚಂದ್ರನ ಬೆಳದಿಂಗಳು ಮಾತ್ರ ಸೇವಿಸಿ ಜೀವಿಸುವ ಪಕ್ಷಿ) ಗೆ ಬಂಧುವಾದ ಚಂದ್ರನನ್ನು ಅಲಂಕಾರವಾಗಿ ಶಿರಸ್ಸಿನಲ್ಲಿ ಧರಿಸಿದ,

ಇಂಥ ಶಿವನು ನಮಗೆ ಲೌಕಿಕ ಹಾಗೂ ಆಧ್ಯಾತ್ಮಿಕ ಸಂಪತ್ತುಗಳನ್ನು ಕರುಣಿಸಲಿ

ಲಲಾಟಚತ್ವರಜ್ವಲದ್ಧನಂಜಯಸ್ಫುಲಿಂಗಭಾ-
-ನಿಪೀತಪಂಚಸಾಯಕಂ ನಮನ್ನಿಲಿಂಪನಾಯಕಮ್ ।
ಸುಧಾಮಯೂಖಲೇಖಯಾ ವಿರಾಜಮಾನಶೇಖರಂ
ಮಹಾಕಪಾಲಿಸಂಪದೇಶಿರೋಜಟಾಲಮಸ್ತು ನಃ ॥ 6 ॥

ಪ್ರತಿ ಪದದ ಅರ್ಥ 6.ಲಲಾಟ - ಹಣೆಯ ಚತ್ವರ - ಸ್ಥಂಡಿಲ(ಯಜ್ಞ ಕುಂಡ) ದಲ್ಲಿ ಜ್ವಲತ್ - ಉರಿಯುವ ಧನಂಜಯ - ಅಗ್ನಿಯ ಸ್ಫುಲಿಂಗ - ಕಿಡಿಗಳಿಂದ

ಭಾ - ತೇಜಸ್ಸಿನಿಂದ ನಿಪೀತ - ಕುಡಿದ,ನುಂಗಿದ, ಪಂಚ ಸಾಯಕಂ - ಪಂಚಬಾಣ(ಮನ್ಮಥ) ನುಳ್ಳ

ನಮತ್- ನಮಿಸುವ ನಿಲಿಂಪ - ದೇವತೆಗಳ ನಾಯಕಂ - ನಾಯಕರುಳ್ಳ

ಸುಧಾ- ಅಮೃತದ ಮಯೂಖ - ಕಿರಣಗಳಿಂದ, 'ಅಮೃತ ಕಿರಣ' ನೆನಿಸಿದ ಚಂದ್ರನಿಂದ (ರಚಿತ) ಲೇಖಯಾ - ರೇಖೆಯಿಂದ, ವಿರಾಜಮಾನ - ರಾರಾಜಿಸುವ, ಶೇಖರಮ್ -ಶಿರೋ ಅಲಂಕಾರವುಳ್ಳ

ಮಹಾ ಕಪಾಲಿ - ಪರ ಶಿವನ, ಸಂಪದೇ - ಸಂಪತ್ತಿನಲ್ಲಿ, ಶಿರೋ - ಶಿರಪ್ರಾಯವೆನಿಸಿದ,ಶ್ರೇಷ್ಠವಾದ ಜಟಾಲಂ - ಜಟಾಧಾರೀ ತಪಸ್ವೀ,(ತಪೋಗುಣವು) ನ: ನಮ್ಮ (ಶ್ರೇಯಸೇ- ಅಭ್ಯುದಯಕ್ಕೆ,ಸಾಧನೆಗೆ) ಅಸ್ತು - ಉಂಟಾಗಲಿ,ಒದಗಲಿ

೬.ತಾತ್ಪರ್ಯ - ಪರಶಿವನ ಹಣೆಯ ಮೇಲಿರುವ ಮೂರನೇ ಕಣ್ಣು ಒಂದು ಯಜ್ಞ ಕುಂಡ. ಶಿವನ ತಪಸ್ಸಿಗೆ ವಿಘ್ನ ತಂದ ಕಾಮ ಈ ಯಜ್ಞಾಗ್ನಿಗೆ ಆಹುತಿಯಾದ.

ಕಾಮನ ಈ ಕಾರ್ಯಕ್ಕೆ ಪ್ರಚೋದಿಸಿದ ದೇವನಾಯಕರೆಲ್ಲ ಶಿವನ ನಮಿಸಿ ನಿಂದರು.(ಕ್ಷಮೆ ಕೋರಿದರು)

ಅಮೃತ ಕಿರಣ ಚಂದ್ರ ಶಿವನಿಗೆ ಶಿರೋ ಭೂಷಣನಾದ. (ಮುನಿದ ತಲೆಗೆ ತಂಪೆರೆದ!)

ಮಹಾಕಪಾಲಿ,ಜಟಾಧಾರೀ,ತಪಸ್ವೀ ಇಂಥ ಮಹಾ ಮಹಿಮೋಪೇತ ಶಿವನು ನಮಗೆ ಅಭ್ಯುದಯವನ್ನುಂಟು ಮಾಡಲಿ. ತಪಕ್ಕೆ ಅಗತ್ಯವಾಗುವ ಏಕಾಗ್ರ ಚಿತ್ತವನ್ನೀಯಲಿ.

ಕರಾಲಫಾಲಪಟ್ಟಿಕಾಧಗದ್ಧಗದ್ಧಗಜ್ಜ್ವಲ-
ದ್ಧನಂಜಯಾಧರೀಕೃತಪ್ರಚಂಡಪಂಚಸಾಯಕೇ ।

ಧರಾಧರೇಂದ್ರನಂದಿನೀಕುಚಾಗ್ರಚಿತ್ರಪತ್ರಕ-
-ಪ್ರಕಲ್ಪನೈಕಶಿಲ್ಪಿನಿ ತ್ರಿಲೋಚನೇ ಮತಿರ್ಮಮ ॥ 7 ॥

ಪ್ರತಿ ಪದದ ಅರ್ಥ 7 - ಕರಾಳ - ಭಯಾನಕ, ಭಾಲ-ಹಣೆಯ, ಪಟ್ಟಿಕಾ - ಪಟ್ಟಿಯಲ್ಲಿ, ಧಗದ್ ಧಗದ್ ಜ್ವಲತ್ - ಧಗಧಗಿಸುತ್ತ ಉರಿಯುವ,ಧನಂಜಯ -ಅಗ್ನಿಗೆ,ಆಹುತೀಕೃತ - ಆಹುತಿಯಾಗಿ ಮಾಡಲ್ಪಟ್ಟ,ಪ್ರಚಂಡ - ಪ್ರಚಂಡನಾದ ಪಂಚಸಾಯಕೇ- ಮನ್ಮಥನುಳ್ಳ,

ಧರಾ ಧರ - ಪರ್ವತಗಳಿಗೆ ಇಂದ್ರ - ಒಡೆಯನಾದ ಹಿಮಾಲಯನ ನಂದಿನೀ - ಮಗಳಾದ ಪಾರ್ವತಿಯ ಕುಚಾಗ್ರ - ಕುಚಗಳ ಅಗ್ರ ಭಾಗದಲ್ಲಿ ಚಿತ್ರ -ಚಿತ್ರ ವಿಚಿತ್ರವಾದ, ವಿವಿಧ ವರ್ಣ ರಂಜಿತ, ಸುಗಂಧಮಯ ಪತ್ರಕ - ಪತ್ರಗಳನ್ನು, ಪರ್ಣಗಳನ್ನು ಪ್ರಕಲ್ಪನ - ಕುಶಲತೆಯಿಂದ ರಚಿಸುವಲ್ಲಿ ಏಕ - ಒಬ್ಬನೇ ಆದ ಶಿಲ್ಪಿನಿ - ಶಿಲ್ಪಿಯಾದ ('ಅಪರ್ಣಾ' ಳಲ್ಲಿ ಪರ್ಣ ರಚನಾ ಚಾತುರ್ಯದ ಏಕಮಾತ್ರ ಶಿಲ್ಪಿ) ತ್ರಿಲೋಚನೇ - 'ಮೂರು ಕಣ್ಣಿನವ' ನಲ್ಲಿ

ಮಮ - ನನ್ನ ರತಿಃ- ಪ್ರೀತಿಯು (ಸದಾ ಅಸ್ತು- ಯಾವಾಗಲೂ ಇರಲಿ).

ತಾತ್ಪರ್ಯ 7- ಭಯಾನಕ ಹಣೆಪಟ್ಟಿ, ಅಲ್ಲಿ ಧಗ ಧಗಿಸುವ ಬೆಂಕಿ,ಆ ಬೆಂಕಿಗೆ ಆಹುತಿ ಕೊಡಲ್ಪಟ್ಟ ಪಂಚಬಾಣನಾದ ಮನ್ಮಥ.(ಕಾಮಪ್ರಚೋದಕ ಮದನನಂಥವರಿಗೆ ಇಂಥ ಭಯಂಕರ ರೂಪ ತೋರಿದೆ)

ಪರ್ವತನ ಮಗಳಾದ (ಸುಕುಮಾರಿ) ಪಾರ್ವತಿಯ ಎದೆಯ ಮೇಲೆ (ಶಕ್ತಿಯ ಅಭಿವ್ಯಕ್ತಿ ಎನಿಸಿದ ಭೂ ಮಂಡಲದ ಮೇಲೆ)ವರ್ಣ ರಂಜಿತ ವಿವಿಧ ಸುಗಂಧ ಭರಿತ ಚಿತ್ರಗಳನ್ನೂ ಪ್ರಕಲ್ಪಿಸಿದ ಏಕೈಕ ಶಿಲ್ಪಿ ನೀನು!

ಈ ಸಮಗ್ರ ಸೃಷ್ಟಿಯು ಅರ್ಧನಾರೀಶ್ವರನ, ಶಿವ ಶಕ್ತಿಯ ಲೀಲಾ ವಿಲಾಸವಷ್ಟೇ.

ಇಂಥ ತ್ರಿಲೋಚನ (ಜ್ಞಾನ ದೃಷ್ಟಿ ಸಂಪನ್ನ) ನಲ್ಲಿ ನನಗೆ ಭಕ್ತಿ ಸ್ಥಿರವಾಗಲಿ.

ಪಂಚ ಬಾಣ- ಅರವಿಂದಂ ಅಶೋಕಮ್ ಚ ಚೂತಮ್ ಚ ನವಮಲ್ಲಿಕಾ

ನೀಲೋತ್ಪಲಂ ಚ ಪಂಚೈತೇ ಪಂಚ ಬಾಣಸ್ಯ ಸಾಯಕಾಃ (ಅಮರ ಕೋಶ)

ನವೀನಮೇಘಮಂಡಲೀ ನಿರುದ್ಧದುರ್ಧರಸ್ಫುರತ್-
ಕುಹೂನಿಶೀಥಿನೀತಮಃ ಪ್ರಬಂಧಬಂಧುಕಂಧರಃ ।
ನಿಲಿಂಪನಿರ್ಝರೀಧರಸ್ತನೋತು ಕೃತ್ತಿಸಿಂಧುರಃ
ಕಳಾನಿಧಾನಬಂಧುರಃ ಶ್ರಿಯಂ ಜಗದ್ಧುರಂಧರಃ ॥ 8 ॥

ಪ್ರತಿ ಪದದ ಅರ್ಥ 8 - ನವೀನ - ನೂತನ ಮೇಘ -ಮೋಡಗಳ ಮಂಡಲಿ -ಸಮೂಹ ದಿಂದ ನಿರುದ್ಧ -ತಡೆಯಲ್ಪಟ್ಟ ದುರ್ಧರ - ತಡೆಯಲಸಾಧ್ಯವಾದ ಸ್ಫುರತ್ - ಪ್ರಕಾಶಿಸುವ ಕುಹೂ - ಕಳೆಗುಂದಿದ ಚಂದ್ರನ,('ನಷ್ಟಇಂದುಕಳಾ ಕುಹೂ:'), ಅಮಾವಾಸ್ಯೆಯ ಚಂದ್ರನ, ನಿಶೀಥಿನೀ - ರಾತ್ರಿ ಸಂಬಂಧಿಯಾದ ತಮ: ಕತ್ತಲೆಯಂತೆ (ಇರುವ)

ಪ್ರಬಂಧ - ತಾಂಡವ ನರ್ತನ ಕಾಲದ ಗೇಯ ಪ್ರಬಂಧಗಳಿಂದ (ಹಾಗೂ ಅವುಗಳಲ್ಲಿನ) ಬದ್ಧ - ಲಯ ಬದ್ಧತೆಯಿಂದ (ಕೂಡಿದ) ಕಂಧರಃ ಕಂಠ ಪ್ರದೇಶ ಉಳ್ಳ

ಕೃತ್ತಿ ಸಿಂಧುರಃ - ಗಜ ಚರ್ಮ ಧಾರಿಯಾದ,

ಕಲಾ -ಸಕಲ ಕಲೆಗಳಿಗೆ ನಿಧಾನಂ - ಆಶ್ರಯನಾದ,ಪೋಷಕನಾದ (ಅಂತೆಯೇ) ಬಂಧುರಃ ಮನೋಹರನಾದ

ಸಕಲ - (ಕಲೆಯನ್ನೂ ಒಳಗೊಂಡ 'ಸಕಲ') ಜಗತ್ - ಜಗತ್ತಿಗೆ, ಧುರಂಧರಃ - ನಾಯಕನಾದ,ಅಗ್ರೇಸರನಾದ

ನಿಲಿಂಪ ನಿರ್ಝರೀ - ದೇವನದಿ ಗಂಗೆಯನ್ನು ಧರಃ ಧರಿಸಿದ,

(ಇಂಥ ಶಿವನು) ಶ್ರಿಯಃ - ತಾಂಡವ ನೃತ್ಯದ ಕಾಂತಿಯನ್ನು,ಕಲಾ ಸಿರಿಯನ್ನು ತನೋತು -ಎಲ್ಲೆಡೆ ಪಸರಿಸಲಿ.

<u>ತಾತ್ಪರ್ಯ</u> 8 - ಸಮುದ್ರ ಮಥನ ಕಾಲದಲ್ಲಿ ಉತ್ಪನ್ನವಾದ ಕಾಲಕೂಟ ವೆಂಬ ಘೋರ ವಿಷ ಪಾನ ಮಾಡಿದ ಪರಿಣಾಮವಾಗಿ ಕಂಠ ಪ್ರದೇಶ ಕಡು ನೀಲಿ ವರ್ಣ ತಳೆದು ನೀಲಕಂಠನೆಂದು ಹೆಸರಾಯಿತಷ್ಟೆ.

ಆ ಕಂಠದ ವರ್ಣನೆಯನ್ನು ಇಲ್ಲಿ ಮಾಡುತ್ತಿದ್ದಾರೆ.

ಅಮಾವಾಸ್ಯೆಯ ರಾತ್ರಿ ಕಾಲ, ಕಳೆ ಕಳೆದು ಕೃಶನಾದ ಚಂದ್ರ,ಗುಂಪು ಗುಂಪಾದ ಕರಿ ಮೋಡಗಳಿಂದ ಆವೃತ, ಇಷ್ಟಾದರೂ ಮೋಡಗಳ ಮಧ್ಯದಿಂದ ಮಂದ ಪ್ರಕಾಶ ಬೀರುವ,ಆಗಲೂ ನೋಡುಗರ ಕಣ್ಮನ ಸೆಳೆಯುವ.

ಅದರಂತೆ ವಿಷ ಪ್ರಾಶನದಿಂದ ನೀಲ ವರ್ಣಕ್ಕೆ ತಿರುಗಿದರೂ ಮಹಾದೇವರ ಕಂಠ ಪ್ರದೇಶ ತನ್ನದೇ ಆದ ಒಂದು ಅನನ್ಯ ಕಾಂತಿಯಿಂದ ಬೆಳಗಿದೆ .

ಪರ ಶಿವನ ಕಂಠ ಹೊರನೋಟಕೆ ಅಮಾವಾಸ್ಯೆಯ ಕತ್ತಲಂತೆ ನಿಗೂಢ.

ಆಂತರ್ಯ ಗಮನಿಸಿದರೆ ಕಂಡೀತು, ಪ್ರಬಂಧಗಳ ಬಂಧ,ನಂಟು.

ಸಂಗೀತವಿಲ್ಲದ ನೃತ್ಯ ಇರಲುಂಟೆ ? ಭಾವಾಭಿವ್ಯಕ್ತಿಗೆ ಗದ್ಯಕ್ಕಿಂತ ಪದ್ಯ ವಾಸಿ, ಪದ್ಯಭಾವ ಕಂಠದಿಂದ ಹೊರ ಹೊಮ್ಮಿದಾಗ ಗೇಯ ಪ್ರಬಂಧ ಗಳ ಅನುರಣನ, ಅದು ಅಂಗ ಪ್ರತ್ಯಂಗಗಳಲ್ಲಿ ತುಂಬಿ,ಮೈದುಂಬಿ ತಾನೇ ತಾನಾಗಿ (ತಾನ,ತಾನ,ತಾನ ವಾಗಿ)ಹೊರ ಹೊಮ್ಮಿದಾಗ ನೃತ್ಯ. ಅಂತೆಯೇ ತಾಂಡವ ನೃತ್ಯದ ಶಿವ 'ಪ್ರಬಂಧ ಬಂಧ ಕಂಧರಃ

'ಬಳುಕಿ ಬಾಗಿ ಹೊಳೆಯು ಆಗಿ' ಹರಿವ, ಸದಾ ನರ್ತನ ಶೀಲ ದೇವ ನದಿ ಗಂಗೆಯನ್ನು ತನ್ನ ಶಿರದಲ್ಲಿ ಧರಿಸಿದವ, ಅಲ್ಲವೇ? 'ನಿಲಿಂಪ ನಿರ್ಝರೀ ಧರ' ಸಕಲ ಕಲಾ ವಲ್ಲಭ,ಕಲೆಗಳ ಆಧಾರ, (**ಕಲಾ ನಿಧಾನ**)

ಕಲಾ ಭಾವ **ಬಂಧುರ** ನಟರಾಜ.

ಗಜ ಚರ್ಮ ಧರಿಸಿ, ಕಲಾ ಜಗತ್ತಿನ ಅಗ್ರೇಸರನಾಗಿ ನರ್ತನಗೈಯುವ ಮನೋಹರ ಶಿವನು ಕಲೋಪಾಸಕರಿಗಾಗಿ, ಭಕ್ತರಿಗಾಗಿ ತನ್ನ ಸಿರಿಯನ್ನು ಸೂರೆಗೊಳ್ಳಲಿ.(**ಶ್ರಿಯಂ ತನೋತು**).

ಪ್ರಫುಲ್ಲನೀಲಪಂಕಜಪ್ರಪಂಚಕಾಲಿಮಪ್ರಭಾ-
-ವಿಲಂಬಿಕಂಠಕಂದಲೀರುಚಿಪ್ರಬದ್ಧಕಂಧರಮ್ |
ಸ್ಮರಚ್ಛಿದಂ ಪುರಚ್ಛಿದಂ ಭವಚ್ಛಿದಂ ಮಖಚ್ಛಿದಂ
ಗಜಚ್ಛಿದಾಂಧಕಚ್ಛಿದಂ ತಮಂತಕಚ್ಛಿದಂ ಭಜೇ ॥ 9 ॥

ಪ್ರತಿ ಪದದ ಅರ್ಥ ೯ - ಪ್ರಫುಲ್ಲ - ಅರಳಿದ ನೀಲಪಂಕಜ - ಕನ್ನೈದಿಲೆ (ನೀಲಿ ಕಮಲ)ಯ ಪ್ರಪಂಚ - ವಿಸ್ತಾರವುಳ್ಳ ಕಾಲಿಮ ಪ್ರಭಾ - ಕಪ್ಪು ಕಾಂತಿಯನ್ನು ಅವಲಂಬಿ - ಮತ್ತೂ ಹೆಚ್ಚಿಸಿದ, ಕಂಠ - ಕಂಠದ, ಕಂದಲೀ - ಕಂದಲ ಪುಷ್ಪಹಾರಗಳ, ರುಚಿ - ಕಾಂತಿಯಿಂದ,ಪ್ರಬದ್ಧ - ಸಮಾವೃತವಾದ ಕಂಧರ - ಕುತ್ತಿಗೆಯುಳ್ಳ

ಸ್ಮರಚ್ಛಿದಂ- ಮನ್ಮಥನನ್ನು ತುಂಡರಿಸಿದ,ಪುರಚ್ಛಿದಂ- ತ್ರಿಪುರಾಸುರನನ್ನು ಛೇದಿಸಿದ,ಭವಚ್ಛಿದಂ - ಸಂಸಾರ ನಾಶಕನಾದ ಮಖ ಛಿದಂ - (ದಕ್ಷನ)ಯಜ್ಞ ವಿಧ್ವಂಸನ ಗೊಳಿಸಿದ ಗಜ ಛಿದ - ಗಜಾಸುರ ಸಂಹಾರಿ,ಅಂಧಕ ಛಿದಂ - ಅಂಧಕ ಎಂಬ ಅಸುರನನ್ನು ಕೊನೆಗೊಳಿಸಿದ, ಅಂತಕ ಛಿದಂ- ಯಮನನ್ನೂ ನಿಗ್ರಹಿಸಿದ ತಮ್ - ತಾಂಡವ ನೃತ್ಯದ ಶಿವನನ್ನು ಭಜೇ -ಭಜಿಸುವೆ.

ತಾತ್ಪರ್ಯ೯ -

ನೀಲಕಂಠ, ಆ ಕಂಠದ ಸುತ್ತ ಅರಳಿದ ಕನ್ನೈದಿಲೆಗಳ ಹಾಗೂ ಕಂದಲ ಪುಷ್ಪಗಳ (ನೀಲಿ ಬಣ್ಣದ ಪುಷ್ಪಗಳ) ಹಾರಗಳು ಕಂಠದ ಕಾಂತಿಯನ್ನು ಹೆಚ್ಚಿಸಿವೆ (ಅಲ್ಲ, ಶಿವನ ಕಂಠದ ಸೌಂದರ್ಯವು ಪುಷ್ಪ ಹಾರಗಳ ಚೆಲುವನ್ನು ಹೆಚ್ಚಿಸಿದೆ)

ಕಾಮನನ್ನು ಛಿದ್ರಗೊಳಿಸಿದ,'ಪುರ' ಎಂಬ ಅಸುರನನ್ನು ತುಂಡರಿಸಿದ,'ಗಜಾಸುರ','ಅಂಧಕಾಸುರ'ರನ್ನು ಸೀಳಿ ಒಗೆದ,

ದಕ್ಷನ ಶಿರತರಿದು ಯಜ್ಞವಿಧ್ವಂಸನಗೈದ, ಯಮನನ್ನೇ ನಿಗ್ರಹಿಸಿದ,ಭವ (ಸಂಸಾರ) ಬಂಧನದಿಂದ ನನ್ನನ್ನು ಮುಕ್ತಗೊಳಿಸುವ ಇಂಥ ತಾಂಡವ ನೃತ್ಯದ ಶಿವನನ್ನು ಭಜಿಸುವೆ.

ಅಗರ್ವಸರ್ವಮಂಗಳಾಕಳಾಕದಂಬಮಂಜರೀ
ರಸಪ್ರವಾಹಮಾಧುರೀ ವಿಜೃಂಭಣಾಮಧುವ್ರತಮ್ |

ಸ್ಮರಾಂತಕಂ ಪುರಾಂತಕಂ ಭವಾಂತಕಂ ಮಖಾಂತಕಂ

ಗಜಾಂತಕಾಂಧಕಾಂತಕಂ ತಮಂತಕಾಂತಕಂ ಭಜೇ ॥ 10 ॥

ಪ್ರತಿ ಪದದ ಅರ್ಥ ೧೦ - ಅಖರ್ವ - ಎಂದೂ ಕುಂದದ ಸರ್ವ - ಎಲ್ಲ ಮಂಗಳಾ- ಮಂಗಳಕರವಾದ ಕಲಾ - ಕಲೆಗಳೆಂಬ, ಕದಂಬಮಂಜರೀ - ಸುಗಂಧಭರಿತ ಕದಂಬ ಪುಷ್ಪ ಗೊಂಚಲುಗಳ ರಸ - ಮಕರಂದದ ಪ್ರವಾಹ ಮಾಧುರೀ - ಪ್ರವಾಹದ ಮಾಧುರ್ಯದ ವಿಜೃಂಭಣ - ಮೆರೆಸುವಿಕೆ,ಅಭಿವ್ಯಕ್ತಿ ಎಂಬ ಮಧುವ್ರತಂ - ದುಂಬಿಯನ್ನು (ದುಂಬಿಯ ಕಾರ್ಯ ಮಾಡುವ ಶಿವನನ್ನು)

ಸ್ಮರಾಂತಕಂ - ಮನ್ಮಥನನ್ನು ಕೊನೆಗಾಣಿಸಿದ ಪುರಾಂತಕಂ - ಪುರ ಎಂಬ ಅಸುರ ಸಂಹಾರಿಯಾದ,ಭವಾಂತಕಂ - ಸಂಸಾರ ವನ್ನು ಅಂತಗಾಣಿಸುವ(ಪ್ರಳಯಕಾರಕ ತಾಂಡವ ಶಿವ) ಮಖಾನ್ತಕಮ್ - ಯಜ್ಞನಾಶಕನಾದ ಗಜಾಂತಕ,ಅಂಧಕಾನ್ತಕಮ್ - ಗಜಾಸುರ ಮತ್ತು ಅಂಧಕಾಸುರರನ್ನು ಕೊಂದ ಅಂತಕಾಂತಕಮ್ - ಅಂತಕನಿಗೇ ಅಂತಕನಾದ ತಮ್ - ತಾಂಡವ ನೃತ್ಯದ ಶಿವನನ್ನು ಭಜೇ - ಭಜಿಪೆ.

<u>ತಾತ್ಪರ್ಯ</u>10 - ಕಾಲ ಕಳೆದಂತೆ, ಯೌವ್ವನ ಗತಿಸಿ ವೃದ್ಧಾಪ್ಯ ಆವರಿಸಿದಾಗ ಎಂಥ ಪ್ರೌಢ ಕಲಾಕಾರನೂ ತನ್ನ ಕಲೆಯಲ್ಲಿ ಮೊದಲಿನ ಸತ್ವ ಕಡಮೆಯಾದುದನ್ನು ಕಾಣಬಹುದು. ಆದರೆ ಪರಶಿವ ಎಂದೂ ಕುಂದದ ಕಲಾ ನಿಪುಣ. ಕಲೋಪಾಸಕರೆಂಬ ಕದಂಬ ಮಂಜರಿ (ಸುಗಂಧ ಭರಿತ ಚಿಗುರು ಗಳು,ಹೂಗಳು) ಗಳಲ್ಲಿ ಅವರವರ ಕಲೋಪಾಸನೆಗನುಗುಣವಾಗಿ ಕಲೆಯ ರಸ,ಮಾಧುರ್ಯ ಚಿಮ್ಮಿಸುವವ, ಹೊಮ್ಮಿಸುವವ. ದುಂಬಿ ಕುಳಿತ ಪುಷ್ಪ ವಿಶಾಲವಾಗಿ ಅರಳಿ, ಮತ್ತಷ್ಟು ಜೇನು, ಇನ್ನಷ್ಟು ಸುಗಂಧ ತನ್ನೊಳಗೆ ತುಂಬಿಕೊಳ್ಳುವಂತೆ,ನಟರಾಜನ ಅಂತಃಸಾನ್ನಿಧ್ಯ ಪಡೆದ ಕಲಾಕಾರರು ವಿಕಸಿತ ಪುಷ್ಪದಂತೆ ಲೋಕದ ಉದ್ದಗಲಕ್ಕೂ ಕಲಾ ಸೌರಭ ಹರಡುತ್ತಾರೆ. ಅಂತೆಯೇ ಇಲ್ಲಿ ಶಿವನನ್ನು 'ವಿಜೃಂಭಣಾ ಮಧುವ್ರತಂ' ಎಂದು ಕೊಂಡಾಡಲಾಗಿದೆ. ಮಧುವ್ರತ ಎಂದರೆ ದುಂಬಿ. ಮಂಜರಿಗಳಲ್ಲಿನ ರಸ ಪ್ರವಾಹ ವಿಜೃಂಭಣವು ದುಂಬಿಯ ಸಹಜ ಸ್ವಭಾವ. ಅದರಂತೆ ಕಲೋಪಾಸಕರ ಹೃದಯದಲ್ಲಿ ಅಡಗಿರುವ,ಅರಳುತ್ತಿರುವ ಕಲಾ ಕುಸುಮ ನಿನ್ನ ಸಾನ್ನಿಧ್ಯದಿಂದ ಅರಳಿ ನಿಲ್ಲುವದು ಇಂಥ ಅಸದೃಶ ದುಂಬಿ ನೀನು ಎಂದು ಬಣ್ಣಿಸಿದ್ದಾರೆ.

ಸ್ಮರಾಂತಕಂ ಎಂದು ಆರಂಭವಾಗುವ ಈ ಶ್ಲೋಕದ ಉತ್ತರಾರ್ಧ, ಸ್ಮರಚ್ಛಿದಂ ಎಂದು ಶುರುವಾಗುವ ಹಿಂದಿನ ಶ್ಲೋಕದ ಉತ್ತರಾರ್ಧ ಇವೆರಡೂ ಒಂದೇ ಎನಿಸುತ್ತವೆ ಶಬ್ದಗಳಲ್ಲಿ ಅಲ್ಪ ವ್ಯತ್ಯಾಸ ಕಂಡರೂ ಅರ್ಥದ ದೃಷ್ಟಿಯಿಂದ ಯಾವ ವ್ಯತ್ಯಾಸ ಕಾಣದು.

ಜಯತ್ವದಭ್ರವಿಭ್ರಮಭ್ರಮದ್ಭುಜಂಗಮಶ್ವಸ-

-ದ್ವಿನಿರ್ಗಮತ್ಕ್ರಮಸ್ಫುರತ್ಕರಾಲಫಾಲಹವ್ಯವಾಟ್ |

ಧಿಮಿದ್ಧಿಮಿದ್ಧಿಮಿಧ್ವನನ್ಮೃದಂಗತುಂಗಮಂಗಳ
ಧ್ವನಿಕ್ರಮಪ್ರವರ್ತಿತ ಪ್ರಚಂಡತಾಂಡವಃ ಶಿವಃ ॥ 11 ॥

ಪ್ರತಿ ಪದಾರ್ಥ 11 - ಅದಭ್ರ - ವಿಪುಲವಾದ,ಬಹಳ ವಿಭ್ರಮ - ನಾಟ್ಯದ ಚಲನೆಯಿಂದಾಗಿ ಭ್ರಮದ್ - ತಿರುಗುವ ಭುಜಂಗ - ಸರ್ಪಗಳ ಶ್ವಸತ್- ಶ್ವಾಸೋಚ್ಛ್ವಾಸದಿಂದಾಗಿ ನಿರ್ಗಮತ್ - ಹೊರ ಹೊಮ್ಮುವ, ಕ್ರಮ -ಕ್ರಮವನ್ನು ಅನುಸರಿಸಿ, ಸ್ಫುರತ್ - ಪ್ರಕಾಶಿಸುವ ಕಿಡಿಗಳಿಂದ ಕೂಡಿದ, ಕರಾಳ - ಬಾಯ್ತೆರೆದುಕೊಂಡಿರುವ,ಭಯಂಕರವಾದ ಫಾಲ - ಹಣೆಯ ಮೇಲಿನ ಹವ್ಯವಾಟ್ - ಯಜ್ಞಾಗ್ನಿಯುಳ್ಳ

ಧಿಮಿ ದ್ಧಿಮಿ ದ್ಧಿಮಿ ಧ್ವನನ್ - ಧಿಮಿ,ಧಿಮಿ,ಧಿಮಿ ಎಂದು ಧ್ವನಿಸುವ, ಮೃದಂಗ -ಮೃದಂಗದ ತುಂಗ - ದೊಡ್ಡ,ಎತ್ತರದ ಮಂಗಳ ಧ್ವನಿ - ಮಂಗಲವನ್ನುಂಟು ಮಾಡುವ ನಾದದ ಕ್ರಮ - ತರಂಗಗಳಿಂದ ಪ್ರವರ್ತಿತ - ಒಡಗೂಡಿದ ಪ್ರಚಂಡ ತಾಂಡವ: ಅದ್ಭುತ ತಾಂಡವ ನೃತ್ಯದ ಶಿವ: ಶಿವನು ಜಯತು - ಜಯಶೀಲನಾಗಲಿ. ಜಯಶೀಲ ಎಂದು ಅವನನ್ನು ಉಪಾಸಿಸುವ ಭಕ್ತರ ಕಾರ್ಯಗಳಲ್ಲಿ ಜಯ ತರಲಿ.(ತಮ್ ಯಥಾ ಉಪಾಸತೇ ತಥೈವ ಭವತಿ).

ತಾತ್ಪರ್ಯ11 - ತಾಂಡವ ನೃತ್ಯ ಕಾಲದಲ್ಲಿ ಶಿವನ ಅವಿರತ ಕುಣಿತದಿಂದಾಗಿ ಅವನ ಕೊರಳ ಸರ್ಪಗಳ ಶ್ವಾಸೋಚ್ಛ್ವಾಸದಲ್ಲಿ ಆವೇಗ ಹೆಚ್ಚಿ ಆ ಸರ್ಪಗಳ ಬಾಯಿಂದ ನಿರ್ಗತವಾದ,ಫೂತ್ಕರಿಸುವ ಮಿಂಚಿನಂಥ ಅಗ್ನಿ ಕಣಗಳು, ಶಿವನ ಹಣೆಯಲ್ಲಿನ ಅಗ್ನಿಕುಂಡ ದ ಕಿಡಿಗಳೊಡನೆ ಮೇಳವಿ ಸಿದವು. ಧಿಮಿ ಧಿಮಿ ಎಂಬ ಮೃದಂಗದ ಉತ್ತುಂಗ ಮಂಗಳ ನಿನಾದ, ಆ ಮೃದಂಗ ಧ್ವನಿ ಅನುಸರಿಸಿ ನಡೆದ ತಾಂಡವ ನರ್ತನ - ಇಂಥ ತಾಂಡವ ನೃತ್ಯದ ಶಿವನಿಗೆ ಜಯವಾಗಲಿ. (ಇಂಥ ಶಿವನ ನೆನೆವ ಭಕ್ತರಿಗೆ ಜಯವಾಗಲಿ).

ದೃಷದ್ವಿಚಿತ್ರತಲ್ಪಯೋರ್ಭುಜಂಗಮೌಕ್ತಿಕಸ್ರಜೋರ್-
-ಗರಿಷ್ಠರತ್ನಲೋಷ್ಠಯೋಃ ಸುಹೃದ್ವಿಪಕ್ಷಪಕ್ಷಯೋಃ ।
ತೃಷ್ಣಾರವಿಂದಚಕ್ಷುಷೋಃ ಪ್ರಜಾಮಹೀಮಹೇಂದ್ರಯೋಃ
ಸಮಂ ಪ್ರವರ್ತಯನ್ಮನಃ ಕದಾ ಸದಾಶಿವಂ ಭಜೇ ॥ 12 ॥

ಪ್ರತಿ ಪದದ ಅರ್ಥ 12–**ದೃಷದ್ - ಬಂಡೆಕಲ್ಲಿನ ವಿಚಿತ್ರ - ನಾ ನಾ ತರಹದ ತಲ್ಪಯೋ: ಹಾಸುಗಳಲ್ಲಿ,ಭುಜಂಗಮೌಕ್ತಿಕ - ಶ್ರೇಷ್ಟ ರತ್ನಗಳಿಂದ ನಿರ್ಮಿತ ಸ್ರಜೋ: - ಹಾರಗಳಲ್ಲಿ,**

ಗರಿಷ್ಟ ರತ್ನ ಲೋಷ್ಠಯೋ: - ಶ್ರೇಷ್ಠ ರತ್ನ ಮತ್ತು ಒಣ ಕಟ್ಟಿಗೆ ತುಂಡು ಇವುಗಳಲ್ಲಿ,

ಸುಹೃತ್ -ಸ್ನೇಹಿತ,ಪಕ್ಷ- ನಮ್ಮವರ ಗುಂಪು, ವಿಪಕ್ಷ - ನಮ್ಮವರಲ್ಲದವರು ಇವೆರಡರಲ್ಲಿ,

ತೃಣ - ಹುಲ್ಲು ಕಡ್ಡಿ, ಅರವಿಂದ ಚಕ್ಷುಷೋ: - ಕಮಲ ನೇತ್ರಗಳಲ್ಲಿ (ಕಮಲ ನೇತ್ರೆಯರಲ್ಲಿ,ಸುಂದರ ಸ್ತ್ರೀಯರಲ್ಲಿ)

ಪ್ರಜಾ - ಪ್ರಜೆಗಳಲ್ಲಿ,ಮಹೀ ಮಹೀಂದ್ರಯೋ: - ರಾಜರಲ್ಲಿ

ಸಮಂ - ಸಮ ದೃಷ್ಟಿಯಿಂದ ಪ್ರವರ್ತಯನ್ – ವರ್ತಿಸುವ ಮನ: - ಮನಸ್ಸುಳ್ಳವನಾಗಿ

ಕದಾ - ಯಾವಾಗ ಸದಾಶಿವಂ - ಸದಾಶಿವನನ್ನು ಭಜೇ - ಭಜಿಸಿಯೇನು ?

<u>ತಾತ್ಪರ್ಯ12 -</u>

ರತ್ನದ ಹೂ ಹಾರಗಳಿಂದ ನಿರ್ಮಿತ ಹಾಸಿಗೆ, ಒರಟು ಕಲ್ಲಿನ ಹಾಸು ಬಂಡೆ;

ಉತ್ತಮ ಜಾತಿಯ ರತ್ನ, ಕಟ್ಟಿಗೆ ತುಂಡು;

ನನ್ನವರು ಪರರು;

ಒಣಗಿದ ಹುಲ್ಲು ಕಡ್ಡಿ, ನಯನ ಮನೋಹರ ಸುಂದರಾಂಗಿ;

ಭೂಮಿಯನ್ನಾಳುವ ಮಹಾರಾಜ,ಸಾಮಾನ್ಯ ಪ್ರಜೆ ;

ಇವುಗಳಲ್ಲಿ ಸಮ ಭಾವ ತಾಳಿದ (ಎಲ್ಲೆಲ್ಲೂ ಶಿವನನ್ನು ಕಾಣುವ) ಮನಸ್ಸುಳ್ಳವನಾಗಿ,

ನಾನೆಂದು ಸದಾಶಿವನನ್ನು ಭಜಿಸಿಯೇನು? (ಸದಾಶಿವನೇ, ಅಂತಹ ಪಕ್ವ ಮನಸ್ಥಿತಿಯನ್ನು ಕರುಣಿಸು)

(ಹೋಲಿಸಿ - ಪಂಡಿತಾ: ಸಮ ದರ್ಶಿನ:, ಸಮ ಲೋಷ್ಟ ಅಶ್ಮ ಕಾಂಚನ:, - ಗೀತಾ)

ಕದಾ ನಿಲಿಂಪನಿರ್ಝರೀನಿಕುಂಜಕೋಟರೇ ವಸನ್
ವಿಮುಕ್ತದುರ್ಮತಿಃ ಸದಾ ಶಿರಃಸ್ಥಮಂಜಲಿಂ ವಹನ್ ।
ವಿಮುಕ್ತಲೋಲಲೋಚನೋ ಲಲಾಟಫಾಲಲಗ್ನಕಃ
ಶಿವೇತಿ ಮಂತ್ರಮುಚ್ಚರನ್ ಸದಾ ಸುಖೀ ಭವಾಮ್ಯಹಮ್ ॥ 13 ॥

ಪ್ರತಿ ಪದದ ಅರ್ಥ 13 – ನಿಲಿಂಪ ನಿರ್ಝರೀ - ದೇವಗಂಗೆಯ (ದಡದಲ್ಲಿನ) ನಿಕುಂಜ - ವನದ ಕೋಟರೆ - ಗುಹೆಯಲ್ಲಿ ವಸನ್ -ವಾಸ ಮಾಡುತ್ತಾ ,ವಿಮುಕ್ತ ದುರ್ಮತಿ: - ಕೆಟ್ಟ ಭಾವನೆಗಳನ್ನೆಲ್ಲ ತೊರೆದು ಸದಾ - ಯಾವಾಗಲೂ ಶಿರಸ್ಥಮ್ - ತಲೆಯ (ಮೇಲೆ) ಅಂಜಲಿಮ್ - ಬದ್ಧಾಂಜಲಿಯನ್ನು (ನಿನಗೆ ನಮಿಸಿ ಕಟ್ಟಿದ ಕೈಗಳನ್ನು) ವಹನ್ -ಧರಿಸಿದವನಾಗಿ ವಿಮುಕ್ತ -ಬಿಟ್ಟ ಲೋಲ ಲೋಚನ: - ಕಣ್ಣಿನ ಚಾಂಚಲ್ಯವುಳ್ಳವನಾಗಿ,ಲಲಾಮ - ಶ್ರೇಷ್ಠವಾದ ಭಾಲ - (ನಿನ್ನ) ಹಣೆಗೆ, ಲಗ್ನಕ: - ಸಂಬಂಧ ಹೊಂದಿ (ನನ್ನ ದೃಷ್ಟಿಯನ್ನು,ಮನಸ್ಸನ್ನೂ ಕೇಂದ್ರೀಕರಿಸಿ) ಶಿವೇತಿ - ಶಿವ ಶಿವ ಎಂದು ಮಂತ್ರಂ - ಶಿವ ಮಂತ್ರವನ್ನು ಉಚ್ಚರನ್- ಉಚ್ಚರಿಸುತ್ತ ಅಹಂ -ನಾನು ಕದಾ - ಎಂದು ಸುಖೀ ಭವಾಮಿ - ಸುಖಿಯಾದೇನು ?

ತಾತ್ಪರ್ಯ13 - ದೇವಗಂಗೆಯ ತೀರದಲ್ಲಿನ ಕಾಡಿನ ಒಂದು ಗುಹೆಯಲ್ಲಿ ನನ್ನ ವಾಸ. ಎಲ್ಲ ದುಷ್ಟ ಭಾವನೆ,ದುರಾಸೆ ತೊರೆದು ಶುದ್ಧ ಮನಸ್ಕನಾಗಿದ್ದೇನೆ. ಎರಡೂ ಕೈಗಳನ್ನೆತ್ತಿ ತಲೆಯ ಮೇಲೆ ಇಟ್ಟು ಭಕ್ತಿಯಿಂದ ನಿನಗೆ ನಮಿಸಿರುವೆ. ನನ್ನ ದೃಷ್ಟಿ ಅತ್ತಿತ್ತ ನೋಡುವದನ್ನು ಬಿಟ್ಟು, ನಿನ್ನ ಹಣೆ ಮೇಲಿನ ಮೂರನೇ ಕಣ್ಣಿನತ್ತ ನೆಟ್ಟಿದೆ,ಅದರೊಡನೆ ಸಂಬಂಧ ಸ್ಥಾಪಿಸಿದೆ. ನನ್ನ ಬಾಯಿ ಶಿವ ಶಿವ ಎನ್ನುತ್ತಾ ನಿನ್ನ ಮಂಗಳ ನಾಮವನ್ನು ಉಚ್ಚರಿಸುತ್ತಲಿದೆ. ಇದೇ ನನಗೆ ಸುಖ. ನಿಜವಾದ ಸುಖ. ಇಂಥ ಸುಖಿ ನಾನೆಂದು ಅದೇನು ? (ಬೇಗನೆ ಆಗುವಂತೆ ನೀ ಅನುಗ್ರಹಿಸು)

ಇಮಂ ಹಿ ನಿತ್ಯಮೇವಮುಕ್ತಮುತ್ತಮೋತ್ತಮಂ ಸ್ತವಂ
ಪಠನ್ಸ್ಮರನ್ಬ್ರುವನ್ನರೋ ವಿಶುದ್ಧಿಮೇತಿಸಂತತಮ್ |
ಹರೇ ಗುರೌ ಸುಭಕ್ತಿಮಾಶು ಯಾತಿ ನಾನ್ಯಥಾ ಗತಿಂ
ವಿಮೋಹನಂ ಹಿ ದೇಹಿನಾಂ ಸುಶಂಕರಸ್ಯ ಚಿಂತನಮ್ || 14 ||

ಪ್ರತಿ ಪದದ ಅರ್ಥ 14-ಉಕ್ತಮ್ - ಈಗ ಹೇಳಿದ ಇಮಂ - ಈ ಉತ್ತಮೋತ್ತಮಮ್ - ಅತ್ಯುತ್ತಮವಾದ ಸ್ತವಮ್ - ಸ್ತೋತ್ರವನ್ನು ನಿತ್ಯಮೇವ -ನಿತ್ಯದಲ್ಲೂಪಠನ್ - ಪಠಿಸುವ, ಸ್ಮರನ್ -ಸ್ಮರಿಸುವ, ಬ್ರುವನ್ - (ಮತ್ತೊಬ್ಬರಿಗೆ) ಹೇಳುವ ನರ: ಮನುಷ್ಯನು, ಸಂತತಂ ವಿಶುದ್ಧಿಮ್ - ಸತತ ಪರಿಶುದ್ಧಿಯನ್ನು ಏತಿ -ಹೊಂದುತ್ತಾನೆ

ಹರೇ -ಹರನಲ್ಲಿ,ಗುರೌ -ಗುರುಗಳಲ್ಲಿ ಸುಭಕ್ತಿಮ್ - ಸಮೀಚೀನ ಭಕ್ತಿಯನ್ನು ಆಶು -ಬೇಗನೆ ಯಾತಿ -ಹೊಂದುತ್ತಾನೆ.

ಅನ್ಯಥಾ - ಬೇರೆ ಗತಿಂ(ಗತಿ:) ನ - ಗತಿಯಿಲ್ಲ,ಉದ್ಧಾರಕ್ಕೆ ಅನ್ಯ ಮಾರ್ಗವಿಲ್ಲ.

ಸುಶ0ಕರಸ್ಯ ಚಿಂತನಮ್ - ಮಹಿಮಾನ್ವಿತನಾದ ಶಂಕರನ ಈ ಚಿಂತನವು ದೇಹಿನಾಮ್ - ದೇಹ ಧಾರಿಗಳಿಗೆ,ಮನುಷ್ಯರಿಗೆ, ವಿ-ಮೋಹನಂ - ಸಂಸಾರ ಮೋಹದಿಂದ ವಿಮುಖರನ್ನಾಗಿಸುವುದು.

ತಾತ್ಪರ್ಯ14 - ಈ ಅತ್ಯುತ್ತಮ ಸ್ತೋತ್ರವನ್ನು ಪ್ರತಿದಿನ ಪಠಿಸುವವ ,ಬೇರೆಯರಿಗೆ ಹೇಳುವವ ,ಮನದಲ್ಲಿ ಸ್ಮರಿಸುವವ ಸದಾ ಶುದ್ಧ . ಇವನು ಶಿವನಲ್ಲೂ, ಗುರುಗಳಲ್ಲೂ ಶ್ರದ್ಧಾ ಯುಕ್ತ ಭಕ್ತಿಯನ್ನು ಬೇಗನೆ ಹೊಂದುತ್ತಾನೆ. ಮನುಷ್ಯನಿಗೆ ಸಂಸಾರ ಬಂಧನದಿಂದ ಬಿಡುಗಡೆ ಪಡೆಯಲು ಇದೇ ಮಾರ್ಗ.ಬೇರಾವ ಉಪಾಯವಿಲ್ಲ.

ಪೂಜಾವಸಾನಸಮಯೇ ದಶವಕ್ತ್ರಗೀತಂ ಯಃ
ಶಂಭುಪೂಜನಪರಂ ಪಠತಿ ಪ್ರದೋಷೇ |
ತಸ್ಯ ಸ್ಥಿರಾಂ ರಥಗಜೇಂದ್ರತುರಂಗಯುಕ್ತಾಂ
ಲಕ್ಷ್ಮೀಂ ಸದೈವ ಸುಮುಖಿಂ ಪ್ರದದಾತಿ ಶಂಭುಃ || 15 ||

ಪ್ರತಿ ಪದದ ಅರ್ಥ -15 ಪೂಜಾವಸಾನ ಸಮಯೇ - ಪೂಜೆಯ ಕೊನೆಗೆ ಪ್ರದೋಷೇ - ಪ್ರದೋಷ ಸಮಯದಲ್ಲಿ ಶಂಭುಪೂಜನಪರಂ - ಶಂಭು ಪೂಜನ ಮಾಡುವ ದಶವಕ್ತ್ರ ಗೀತಂ - ರಾವಣನಿಂದ ರಚಿತವಾದ ಈ

ಗೀತೆಯನ್ನು,ಸ್ತೋತ್ರವನ್ನು ಯಃ - ಯಾರು ಪಠತಿ - ಪಠಿಸುತ್ತಾನೋ ತಸ್ಯ - ಅವನಿಗೆ ಸ್ಥಿರಾಂ - ಸ್ಥಿರವಾದ ರಥ ಗಜೇಂದ್ರ ತುರಂಗ ಯುಕ್ತಾಮ್ - ಶ್ರೇಷ್ಠವಾದ ಆನೆ,ಕುದುರೆ ಮತ್ತು ರಥ ಗಳಿಂದ ಕೂಡಿದ ಸುಮುಖೀಮ್ - ಹಸನ್ಮುಖಿಯಾದ, ಲಕ್ಷ್ಮೀಮ್ - ಲಕ್ಷ್ಮಿಯನ್ನು(ಸಂಪತ್ತನ್ನು) ಸದೈವ - ಯಾವಾಗಲೂ ಶಂಭು: ಶಂಭುವು ಪ್ರದದಾತಿ - ನೀಡುವನು.

<u>ತಾತ್ಪರ್ಯ</u>15 - ಪೂಜೆಯ ಕೊನೆಗೆ,ಪ್ರದೋಷ ಕಾಲದಲ್ಲಿ ಶಂಭು ಪೂಜನ ಪರವಾದ ಈ ಸ್ತೋತ್ರವನ್ನು ಯಾರು ಪಠಿಸುತ್ತಾರೋ,ಅವರಿಗೆ ಶಂಭುವು ಆನೆ,ಕುದುರೆ,ರಥ ಮುಂತಾದವುಗಳಿಂದ ಕೂಡಿ ಶೋಭಿಸುವ ಸಂಪತ್ತನ್ನು ಕರುಣಿಸುವನು.

*** ಸಮಾಪ್ತಮ್ **